ವಿ. ಹಮೀದ್, ವಿಟ್ಲ
ಲವ್ವನ್ನು ಸಮುದ್ರಕ್ಕೆ ಹೋಲಿಸುತ್ತಾರೇಕೆ?



ಎರಡೂ ಕಡೆ ಮುಳುಗಿದವರು ಹೊರಬರುವುದು ಕಷ್ಟವಾದ್ದರಿಂದ.

ಟಿ. ನಿಶಾಂತ್, ತುಮಕೂರು
ರಾಮ್ ಅಂಕಲ್ ಅಡ್ರೆಸ್ ಹೇಳು ಅಂದ್ರೆ ನನ್ನಣ್ಣ ಗೊತ್ತಿಲ್ಲ ಅಂತಾನೆ. ಹೇಳ್ತೀರಾ ಪ್ಲೀಸ್...?
ಬರ್‍ಕೊಳ್ಳಿ... ರಾಮ್ ಅಂಕಲ್, ಪುಟ 14, ಸುಧಾ ವಾರಪತ್ರಿಕೆ, ಗುರುವಾರನಗರಿ.

ರತ್ನಾ, ಕೊರವರ
ಮಕ್ಕಳಿಗೆ ಕುಂತಿ, ದ್ರೌಪದಿ, ದುರ್ಯೋಧನ ಇವರ ಹೆಸರುಗಳನ್ನು ಇಡಲು ಹೆದರುವುದೇಕೆ?
ಹೆಸರಿಗೆ ತಕ್ಕಂತೆ ನಡೆದುಕೊಂಡರೆ ಕುರುಕ್ಷೇತ್ರ ತಪ್ಪದೆಂದು.

ಬಾ.ರಂ. ಸುರೇಶ್, ಶಿವಮೊಗ್ಗ
ಈ ವಾರಭವಿಷ್ಯದಲ್ಲಿ ಗಂಡ–ಹೆಂಡತಿ ಸಂತೋಷದಿಂದ ಕಾಲ ಕಳೆಯುತ್ತೀರಿ ಎಂದಿದೆಯಲ್ಲಾ...?



ಈಗಲಾದರೂ ವಾರಭವಿಷ್ಯ ನಂಬಬಾರದು ಎಂದು ತಿಳಿಯಿರಿ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
ಕೊರೊನಾ ಕಾಲದಲ್ಲೂ ರಾಜಕಾರಣಿಗಳಿಗೆ ಒಮ್ಮೊಮ್ಮೆ ಚುನಾವಣೆ ನಡೆಸುವ ಯೋಚನೆ ಬರುತ್ತದಲ್ಲಾ...?
ಲಾಕ್ಡೌನ್ ಸಮಯದಲ್ಲೂ ಹೆಂಡಕ್ಕೆ ಹಾತೊರೆದವರನ್ನು ನೋಡಿ ಎಲೆಕ್ಷನ್ ಗೆಲ್ಲಬಹುದು ಎನಿಸುತ್ತಂತೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಸ್ವರ್ಗದ ಹೆಬ್ಬಾಗಿಲು ಇದೆಯೆ?
ತೃಪ್ತಿಯ ಮೆಟ್ಟಿಲು ಏರಿದ ತಕ್ಷಣ ಸಿಗುವುದೇ ಅದು.

ಜಿ.ಜಿ.ಹಳ್ಳಿ ಚಿದಾನಂದ, ಹಿರಿಯೂರು
ಸರ್ಕಾರಿ ಕೆಲಸ ದೇವರ ಕೆಲಸ. ದೇವರ ಕೆಲಸ ಮಾಡಿಕೊಡಲು ಲಂಚ ಪಡೆಯುವುದು ನ್ಯಾಯವೆ?
‘ನೈವೇದ್ಯಂ ಸಮರ್ಪಯಾಮಿ; ಮಧ್ಯೆ ಮಧ್ಯೇ ಆಚಮನಂ ಸಮರ್ಪಯಾಮಿ’ ಇರಲೇಬೇಕಲ್ಲ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ಬರೀ ಕಣ್ಣೀರಿನಿಂದಲೇ ಜೀವನ ಸಾಗಿಸಲು ಸಾಧ್ಯವೇ?
‘ಸಾಧ್ಯ’ ಎಂದರು ಸೀರಿಯಲ್ ನಿರ್ಮಾಪಕರು.

ಕೆ.ಜಿ. ಶೇಖರಪ್ಪ, ಅರಸೀಕೆರೆ
ಮಾನವನ ಜೀವನವನ್ನು ಸುಂದರ ಮರಕ್ಕೆ ಹೋಲಿಸಬಹುದೆ ಸಾರ್?
ಕಲ್ಲು ಹೊಡೆದರೂ ಹಣ್ಣು ಕೊಡುವ ಗುಣ ಇರುವವರಿದ್ದರೆ, ಹೋಲಿಸಬಹುದು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಸತ್ಯ ಎಲ್ಲಿ ಕಾಣುವುದು?
ಸತ್ಯವಂತರ ನಡೆಯಲ್ಲಿ, ಸುಳ್ಳರ ಮನದಲ್ಲಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಹೆಣ್ಣನ್ನು ಹಕ್ಕಿಗೆ ಹೋಲಿಸುವುದೇಕೆ?
ಉನ್ನತ ಮಟ್ಟದಿಂದ ಜಗವನ್ನು ಕಾಣುವ ಗುಣ ಇರುತ್ತದಲ್ಲ.

ಎಸ್ವೆನ್ ಮಹಾಬಲರಾವ್, ಎನ್ನಾರ್ಪುರ
ಒಂದೊಂದು ಹುಡುಗಿ ಒಂದೊಂದು ದರ?
ಸದರ ಕೊಟ್ಟರೆ ದರ ಕೇಳುವ ಆದರಹೀನರ ದೃಷ್ಟಿಯೇ ಹಾಗೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಸ್ವಾಮೀಜಿಗಳಿಗೇಕೆ ರಾಜಕೀಯ?
ಪೀಠ ಉಳಿಸಿಕೊಳ್ಳಬೇಕಲ್ಲ. ಪೀಠಾತುರಾಣಾಂ ನ ಭಯಂ ನ ಲಜ್ಜಾ.

ದೇವೇಂದ್ರ, ಕಡೂರು
ಎಲ್ಲರ ಹತ್ತಿರ ಒಳ್ಳೆಯವರಾಗಿ ಇರುವುದಕ್ಕೆ ಸಾಧ್ಯವಾ ಸಾರ್?
ಮೊಲ ಎಲ್ಲರಿಗೂ ಒಳ್ಳೆಯದೇ ಆಗಿರುತ್ತದೆ ಮಾಂಸ ತಿನ್ನುವವರಿಗೂ!

## ಬಹುಮಾನಿತ ಪ್ರಶ್ನೆ

ನಾಜ್ಯೋತಿ, ಹೂವಿನಹಡಗಲಿ
ಸದಾ ಹರಿಯುವ ನೀರು ತಿಳಿಯಾಗಿರುವಂತೆ ಸದಾ ಯೋಚಿಸುವ ಮನಸ್ಸು ತಿಳಿಯಾಗಿರುವುದಿಲ್ಲವೇಕೆ?
ನದಿಯ ಕಲುಷತೆ ಸೇರಲು ದಂಡೆಗಳಿರುತ್ತವೆ. ಮನಕ್ಕೆ ದಂಡೆ ಇಲ್ಲ.

ಎಂ.ಎ. ಕುಮಾರ್, ಬೆಂಗಳೂರು
ಹಣ ಹೆಣ ಏನು ಸಂಬಂಧ?
ಗೋರಿಯೇ; ಇದನ್ನು ಗೋರಿಕೊಳ್ಳುತ್ತಾರೆ; ಅದಕ್ಕಾಗಿ ಗೋರಿ ಕೊಳ್ಳುತ್ತಾರೆ.

ಕಾವ್ಯಶ್ರೀ ಪತ್ರಿಮಠ, ಸುರಪುರ
ರಜೆ ಇದ್ದರೆ ಮಾತ್ರ ಮಜವೇ?
ಅಧಿಕಾರದಲ್ಲಿದ್ದರೂ ಮಜವೇ ಎಂದು ಮಂತ್ರಿಗಳು ತೋರಿಸಿಕೊಟ್ಟಿದ್ದಾರಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಪ್ರಸ್ತುತ ರಾಜಕೀಯದಲ್ಲಿ ಏನು ಜರುಗುತ್ತಿದೆ ಸಾರ್?



ಸಮಯ.

ಬಿ. ಚಂದ್ರೇಗೌಡ, ಬೆಂಗಳೂರು
ವೈದ್ಯನಿಗೂ, ವೈದಿಕನಿಗೂ ಏನು ವ್ಯತ್ಯಾಸ?
ಅವರ ಕೆಲಸ ಮುಗಿದ ನಂತರವೇ ಇವರ ಕೆಲಸ ಆರಂಭ.

ಪಿ. ಜಯವಂತ ಪೈ, ಕುಂದಾಪುರ
ಪಾಕಶಾಲೆಗೂ, ಪಾಠಶಾಲೆಗೂ ವ್ಯತ್ಯಾಸವೇನು?
ಅಲ್ಲಿ ಬೇಳೆ ಹದವಾಗುತ್ತದೆ, ಇಲ್ಲಿ ಬೆಳವಣಿಗೆ ಹದವಾಗುತ್ತದೆ.

ಶ್ರೀನಿವಾಸ ಕಪ್ಪನಹಳ್ಳಿ
ವಿಶ್ವಸುಂದರಿ ಪ್ರಶಸ್ತಿ ಪಡೆದ ಲಲನೆಯರೆಲ್ಲ ಈಗ ಏನಾಗಿರಬಹುದು ರಾಮ್‌ಜಿ?
ಈಗ ಅವರಿಗೆಲ್ಲ ವಯಸ್ಸಾಗಿದೆ.

**ರಾಮ್**

ಪ್ರಶ್ನೆ ಕಳುಹಿಸಲು: editorsu@sudha.co.in